ಓಎಸ್ ನಂಃ 247/2017 ಪಿ.ಡಬ್ಲ್ಯೂ- 2

ದಿನಾಂಕಃ 17.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಬಿ.ಆರ್.ಎಸ್. ವಕೀಲರಿಂದಃ

ನಿಮ್ಮ ಜಮೀನಿನ ಸರ್ವೆ ನಂಬರ್ ಏನು ಎಂದರೆ ಸ.ನಂ. 49 ಹಿಸ್ಸಾ ನಂಬರ್ ಗೊತ್ತಿಲ್ಲ. ಸ.ನಂ. 49 ಒಟ್ಟು ವಿಸ್ತೀರ್ಣ ಎಷ್ಟು ಎಂದರೆ 160 ಎಕರೆ ಇರುತ್ತದೆ. ಪ್ರಸುತ್ತ ದಾವೆ ಯಾರು ಯಾರ ವಿರುದ್ದ ಹಾಕಿರುತ್ತಾರೆ ಎಂದರೆ ಗೊತ್ತು ಎನ್ನುತ್ತಾರೆ. ವಾದಿಯ ತಂದೆ ಹೆಸರು ಗಂಗುಲಪ್ಪ ಅವರು ತಂದೆಯ ಹೆಸರು ಮುನಿಶಾಮಪ್ಪ. ಸದರಿ ಮುನಿಶಾಮಪ್ಪ ಬದುಕಿದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ. ವಾದಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದರೆ ಅವರ ತಾತ ಮುನಿಶಾಮಪ್ಪರವರಿಗೆ ಮಂಜೂರಾಗಿತ್ತದೆ. ದಾವಾ ಆಸ್ತಿಯ ಹಿಸ್ಸಾ ನಂಬರ್ ಗೊತ್ತಾ ಎಂದರೆ ಗೊತ್ತಿಲ್ಲ. ದಾವಾ ಆಸ್ತಿ ವಿಸ್ತೀರ್ಣ ಎಷ್ಟು ಇರುತ್ತದೆ ಎಂದರೆ 4 ಎಕರೆ ಎನ್ನುತ್ತಾರೆ. ನಿಮ್ಮ ಜಮೀನಿನ ದಾವಾ ಆಸ್ತಿಯ ಯಾವ ದಿಕ್ಕಿಗೆ ಇರುತ್ತದೆ ಎಂದರೆ ದಾವಾ ಆಸ್ತಿಯ ಉತ್ತರಕ್ಕೆ ಇರುತ್ತದೆ. ದಾವಾ ಆಸ್ತಿಗೆ ಹೊಂದುಕೊಂಡಂತೆ ನಿಮ್ಮ ಆಸ್ತಿ ಇಲ್ಲ ಎಂದರೆ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಫಕೀರಪ್ಪ ಆದ ನಂತರ ನನ್ನ ಜಮೀನು ಇರುತದೆ. ಲಕ್ಷಿದೇವಮ್ಮ ಗೊತ್ತು ಎಂದರೆ ಗೊತ್ತು. ದಾವಾ ಆಸ್ತಿ ಪಶ್ಚಿಮಕ್ಕೆ ಲಕ್ಷಿದೇವಮ್ಮ ಇರುತ್ತಾರೆ. ವೆಂಕಟಬೋವಿ ಮುನಿಶಾಮಪ್ಪ ನಿಮ್ಮ ಊರಿನಲ್ಲಿ ಇದ್ದಾರಾ ಎಂದರೆ ಇಲ್ಲ ಎನ್ನುತ್ತಾರೆ. ಅವರಿಗೆ ಸ.ನಂ. 49/6 ಮಂಜೂರಾಗಿರತ್ತದೆ ಎಂದರೆ ಇಲ್ಲ ಎನ್ನುತ್ತಾರೆ. ಸದರಿ ಮುನಿಶಾಮಪ್ಪ ಬದುಕಿದ್ದರೂ ತೀರಿಕೊಂಡಿರುತ್ತಾರೆ ಎಂದು ಖಾತೆ ಮಾಡಿಕೊಂಡಿರುತ್ತಿರಿ

ಎಂದರೆ ಸರಿಯಲ್ಲ. ಸದರಿ ಮುನಿಶಾಮಪ್ಪ ಎ.ಸಿ. ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಅಂತಹ ಮುನಿಶಾಮಿ ಬದುಕಿಲ್ಲ ಎನ್ನುತ್ತಾರೆ. ಪ್ರತಿವಾದಿ ವೆಂಕಟೇಶ ತಂದೆ ಹೆಸರು ಏನು ಎಂದರೆ ಮಲ್ಲಪ್ಪ. ಸ.ನಂ. 49 ಆಸ್ತಿಯಲ್ಲಿ ವಾದಿಗೆ ಆಸ್ತಿ ಇರುತ್ತದೆ ಎಂದರೆ ಇಲ್ಲ. ಮಲ್ಲಪ್ಪರವರಿಗೆ 2 ಎಕರೆ 38 ಗುಂಟೆ ಮಂಜೂರಾಗಿರುತ್ತದೆ ಎಂದರೆ ಮುನಿಶಾಮಪ್ಪರವರಿಗೆ ಆಗಿರುತ್ತದೆ ಅದನ್ನು ವಾದಿ ಮಾಡಿಸಿಕೊಂಡಿರುತ್ತಾರೆ. ದಾವಾ ಆಸ್ತಿಯ ಪಕ್ಕದಲ್ಲಿ ನಿಮ್ಮದು ಯಾವ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಸ.ನಂ. 49 ರಲ್ಲಿ ನಿಮ್ಮದು ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಯಾರ ಆಸ್ತಿ ಎಂದರೆ ಚೌಡಪ್ಪರ ಆಸ್ತಿ. ಸ.ನಂ. 49 ಅನ್ನು ನೀವು ನೋಡೇ ಇಲ್ಲ ಎಂದರೆ ಸರಿಯಲ್ಲ. ವಾದಿ ನಿಮಗೆ ಏನಾಗಬೇಕು ಎಂದರೆ ಸಂಬಂಧ ಇಲ್ಲ. ವಾದಿ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.